158ನೇ ಮುಖ್ಯ SL.NO:- 88 ದಿ:-23-03-2026

<u>ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಬಸನಗೌಡ ಬಾದರ್ಲಿ ಇವರ ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿರುವ ಸೂಚನೆಗೆ ಉನ್ನತ ಶಿಕ್ಷಣ ಸಚಿವರ ಉತ್ತರ.</u>

**ವಿಷಯ:**

ದಿನಾಂಕ:17.03.2026ರಂದು 'ವಿಜಯ ಕರ್ನಾಟಕ ದಿನಪತ್ರಿಕೆಯಲ್ಲಿ 'ಪಿ.ಯು.ಸಿ ಅಂಕಪಟ್ಟಿಗೆ ತಡಕಾಟ' ಎಂಬ ಶೀರ್ಷಿಕೆಯಡಿ, ಪದವಿ ಕಾಲೇಜಿಗೆ ಪ್ರವೇಶಾತಿ ಪಡೆದ ಸಂದರ್ಭದಲ್ಲಿ ಗುಲ್ಬರ್ಗ ವಿಶ್ವವಿದ್ಯಾಲಯಕ್ಕೆ ಕಳುಹಿಸಲಾಗಿದ್ದ ಪಿಯುಸಿ ಅಂಕಪಟ್ಟಿಗಳನ್ನು ಹಿಂದಿರುಗಿ ಪಡೆಯಲು ರಾಯಚೂರಿನ ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯ ವ್ಯಾಪ್ತಿಯ ಸಾವಿರಾರು ವಿದ್ಯಾರ್ಥಿಗಳು ಪರದಾಡುವಂತಾಗಿದೆ. ಗುಲ್ಬರ್ಗ ವಿವಿ ವ್ಯಾಪ್ತಿಯಲ್ಲಿದ್ದ ಯಾದಗಿರಿ, ರಾಯಚೂರು ಜಿಲ್ಲೆಗಳನ್ನು ಬೇರ್ಪಡಿಸಿ, 2021ರಲ್ಲಿ ರಾಯಚೂರಿನಲ್ಲಿ ಪ್ರತ್ಯೇಕ ವಿವಿ ಆರಂಭಿಸಲಾಗಿದೆ. ಉನ್ನತ ಶಿಕ್ಷಣ ವ್ಯವಸ್ಥೆಯಲ್ಲಿ ಸುಧಾರಣೆ ತರುವ ನಿಟ್ಟಿನಲ್ಲಿ ಸರ್ಕಾರ ಹೊಸ ವಿಶ್ವ ವಿದ್ಯಾಲಯ ಆರಂಭಿಸಿದೆ. ಆದರೆ, ಈ ಹಿಂದೆ ಗುಲ್ಬರ್ಗ ವಿವಿ ವ್ಯಾಪ್ತಿಯಲ್ಲಿದ್ದ ಕಾಲೇಜು ವಿದ್ಯಾರ್ಥಿಗಳು ದಾಖಲಾತಿಗಳಿಗೆ ಅಲೆದಾಡುವ ಸ್ಥಿತಿ ತಪ್ಪುವಾಗಿದೆ.

ಪ್ರವೇಶಾತಿ ಸಂದರ್ಭದಲ್ಲಿ ವಿದ್ಯಾರ್ಥಿಗಳು ನಿಯಮಾನುಸಾರ ದ್ವಿತೀಯ ಪಿಯುಸಿ ಮೂಲ ಅಂಕಪಟ್ಟಿಯನ್ನು ಸಂಬಂಧಿಸಿದ ಕಾಲೇಜಿಗೆ ನೀಡಿದ್ದಾರೆ. ಅಂಕಪಟ್ಟಿ ಹಾಗೂ ಅಗತ್ಯ ದಾಖಲೆಗಳನ್ನು ಕಾಲೇಜಿನವರು ಗುಲ್ಬರ್ಗ ವಿ.ವಿಗೆ ಕಳುಹಿಸಿದ್ದರು. ದಾಖಲಾತಿಗಳನ್ನು ಕಳುಹಿಸಿದ ಗುರುತಿಗಾಗಿ ಚೆಕ್‌ಲಿಸ್ಟ್ ಪಡೆಯಲಾಗಿದೆ. ಆದರೆ, ರಾಯಚೂರು ವಿ.ವಿ ಆರಂಭವಾದ ಬಳಿಕ ಈ ಭಾಗದವರು ಪಿಯುಸಿ ಅಂಕಪಟ್ಟಿ ಪಡೆಯಲು ಗುಲ್ಬರ್ಗಕ್ಕೆ ತೆರಳಿದರೆ, ನೀಡದೇ ಇರುವುದು ಬೆಳಕಿಗೆ ಬಂದಿದೆ. ಕಾಲೇಜುವಾರು ಅಂಕಪಟ್ಟಿಗಳನ್ನು ಜೋಡಣೆ ಮಾಡದೆ ಇರುವುದೇ ಸಮಸ್ಯೆಗೆ ಮೂಲ ಕಾರಣವಾಗಿದೆ ಎಂಬ ಆರೋಪ ಕೇಳಿಬಂದಿದೆ. ಜೊತೆಗೆ ಪದವಿಯಲ್ಲಿ ಅನುತ್ತೀರ್ಣಗೊಂಡ ವಿದ್ಯಾರ್ಥಿಗಳು ರಿಪೀಟರ್ ಪರೀಕ್ಷೆ ಬರೆದರೆ ಅವರ ಫಲಿತಾಂಶ ತಿಳಿಯಲು ಹಾಗೂ ಅಂಕಪಟ್ಟಿ ಪಡೆಯಲು ಗುಲ್ಬರ್ಗ ವಿ.ವಿಗೆ ಅಲೆಯಬೇಕಿದೆ.

ಆದುದರಿಂದ, ಸರ್ಕಾರವು ವಿದ್ಯಾರ್ಥಿಗಳ ಭವಿಷ್ಯದ ಹಿತದೃಷ್ಟಿಯಿಂದ ಈ ಸಮಸ್ಯೆಗಳನ್ನು ಕೂಡಲೇ ಬಗೆಹರಿಸುವ ಕುರಿತು ಸದನದ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲು ಬಯಸುತ್ತೇನೆ.

**ಉತ್ತರ:**

ಗುಲಬರ್ಗಾ ವಿಶ್ವವಿದ್ಯಾಲಯವನ್ನು 2021ರಲ್ಲಿ ವಿಭಜಿಸಿ ಆದಿಕವಿ ಶ್ರೀಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯವನ್ನು ಸ್ಥಾಪನೆ ಮಾಡಲಾಗಿರುತ್ತದೆ. ವಿಭಜನೆಗೊಂಡ ತರುವಾಯ ಆದಿಕವಿ ಶ್ರೀಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಕಾಲೇಜುಗಳ ಅಂಕಪಟ್ಟಿಗಳನ್ನು ಆಯಾ ವಿದ್ಯಾರ್ಥಿಗಳ ಅವಶ್ಯಕತೆಗೆ ಅನುಗುಣವಾಗಿ ಸಂಬಂಧಪಟ್ಟ ಕಾಲೇಜುಗಳ ಮುಖಾಂತರ ಅರ್ಜಿ ಸಲ್ಲಿಸಿದ ವಿದ್ಯಾರ್ಥಿಗಳಿಗೆ ಅಂಕಪಟ್ಟಿಗಳನ್ನು ವಿತರಿಸಲಾಗಿದೆ ಮತ್ತು ಕಾಲೇಜುಗಳ ಪ್ರಾಂಶುಪಾಲರು ಪಿ.ಯು.ಸಿ. ಅಂಕಪಟ್ಟಿಗಳನ್ನು ನೀಡಲು ಪತ್ರ ಸಲ್ಲಿಸಿದ ಆಯಾ ಮಹಾವಿದ್ಯಾಲಯಗಳಿಗೆ ಈಗಾಗಲೇ ಅಂಕಪಟ್ಟಿಗಳನ್ನು ಕಳುಹಿಸಲಾಗಿದೆ.

ಮುಂದುವರೆದು, ರಾಯಚೂರಿನ ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯವು ವಿಭಜನೆಯಾಗುವ ಪೂರ್ವದಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದ ಅಧೀನದಲ್ಲಿದ್ದ ಕಾಲೇಜುಗಳು ಸಂಲಗ್ನತೆ ಶುಲ್ಕ ಮತ್ತು ಅರ್ಹತಾ ಪತ್ರಗಳ ಶುಲ್ಕವನ್ನು ಸಂದಾಯ ಮಾಡದೇ ಇರುವ

...2

ಕಾರಣ ಸದರಿ ಕಾಲೇಜುಗಳಿಗೆ ಪಿಯುಸಿ ಅಂಕಪಟ್ಟಿಗಳನ್ನು ಕಳುಹಿಸಿರುವುದಿಲ್ಲ. ಇನ್ನುಳಿದಂತೆ, ಎಲ್ಲಾ ಕಾಲೇಜುಗಳಿಗೆ ವಿದ್ಯಾರ್ಥಿಗಳ ಪಿಯುಸಿ ಅಂಕಪಟ್ಟಿಗಳನ್ನು ಕಳುಹಿಸಲಾಗಿದೆ. ಸಂಲಗ್ನತೆ ಶುಲ್ಕ ಮತ್ತು ಅರ್ಹತಾ ಪತ್ರಗಳ ಶುಲ್ಕವನ್ನು ಪಾವತಿಸುವಂತೆ ಕಾಲೇಜುಗಳಿಗೆ ಗುಲಬರ್ಗಾ ವಿಶ್ವವಿದ್ಯಾಲಯದಿಂದ ಪತ್ರ ಬರೆಯಲಾಗಿದೆ.

**ಸಂಖ್ಯೆ**: ಇಡಿ 96 ಯುಜಿವಿ 2026

(ಡಾ.ಎಂ.ಸಿ. ಸುಧಾಕರ್)
ಉನ್ನತ ಶಿಕ್ಷಣ ಸಚಿವರು